## ವೇತನ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದ ವಿದ್ಯಾರ್ಥಿನಿ

# ಕನಸಿಗೆ ಬಂದ ಭಗವಂತ ಬಾಲೆಯ ಶಿಕ್ಷಣ ಕದ್ದ!

**ಖಂಡಪರಶು** ಮಾಗಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.86 ಅಂಕ ಗಳಿಸಿದ್ದರೂ ತಾಲೂಕಿನ ಬ್ಯಾಲಕೆರೆಯ ಡಾ.ಶಿಮಕುಮಾರ ಸ್ವಾಮೀಜಿ ಗ್ರಾಮಾಂತರ ಪ್ರೌಢಶಾಲೆ ವಿದ್ಯಾರ್ಥಿನಿ ವೇದಾವತಿ ಶಿಕ್ಷಣ ಮುಂದುವರಿಸಲಾಗದ ಸ್ಥಿತಿಯಲ್ಲಿದ್ದಾಳೆ. ಕಾರಣ ಆಕೆಯ ತಾಯಿಯ ಕನಸಿನಲ್ಲಿ ಬಂದ ಭಗವಂತ.

ವೃತ್ತಿಯಲ್ಲಿ ಟೈಲರ್ ಆಗಿರುವ ಬ್ಯಾಲಕೆರೆಯ ಗೋವಿಂದಯ್ಯ ಅವರಿಗೆ ವೇದಾವತಿ ಸೇರಿ ಇಬ್ಬರು ಮಕ್ಕಳಿದ್ದಾರೆ. ಗೋವಿಂದಯ್ಯ ಅವರ ಪತ್ನಿ ಅನಾರೋಗ್ಯ ಪೀಡಿತರಾಗಿದ್ದು ಮನೆಯಲ್ಲಿ ಬಡತನ ತಾಂಡವವಾಡುತ್ತಿದೆ. ವೇದಾವತಿ 8ನೇ ತರಗತಿಯವರೆಗೆ ಓದಿ, ಕುಟುಂಬದ ಬಡತನದ ಕಾರಣದಿಂದ ಶಾಲೆ ತೊರೆದು ಎರಡು ವರ್ಷ ಕೂಲಿ ಕೆಲಸಮಾಡಿ ತಾಯಿಯ ಆರೈಕೆಮಾಡಿದ್ದಳು.

ಆಗ ಊರಿನ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದ ನಾರಾಯಣ್ ಎಂಬುವರು ಶಾಲೆ ತೊರೆದಿದ್ದ ಮಕ್ಕಳನ್ನು ಸರ್ವೆ ಮಾಡಿಸಿದಾಗ ಪತ್ತೆಯಾದವಳು ಪ್ರತಿಭಾವಂತೆ ವೇದಾವತಿ.

ಮುಖ್ಯೋಪಾಧ್ಯಾಯರು ವಿದ್ಯಾರ್ಥಿನಿ ಹಾಗೂ ಅವಳ ಪೋಷಕರ ಮನವೊಲಿಸಿ ಮರಳಿ ಶಾಲೆಗೆ ಸೇರಿಸಿದ್ದರು. ತನಗೆ ಸಿಕ್ಕ ಓದುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡ ವೇದಾ ವಿಶೇಷ ತರಗತಿಗಳಿಗೆ ತಪ್ಪದೇ ಹಾಜರಾಗಿ ಎರಡು ವರ್ಷ ತಪ್ಪಿ ಹೋಗಿದ್ದ ಶಿಕ್ಷಣವನ್ನು ಮತ್ತೆ ಪಡೆದಿದ್ದಳು. ಮರೆತಿದ್ದ ಎಲ್ಲ ವಿಷಯಗಳನ್ನೂ ಹಗಲಿರುಳು ಅಧ್ಯಯನ ಮಾಡಿ 'ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿನಿ' ಎನಿಸಿಕೊಂಡಿದ್ದಳು. ಆ ಕಾರಣಕ್ಕೆ ಸ್ಮೈಟ್ (ಸೋಮಶೇಖರ್ ಶಿಕ್ಷಣ ಸಂಸ್ಥೆ) ಪ್ರಶಸ್ತಿ



ನೀಡಿ ಗೌರವಿಸಿತ್ತು. ಅದರಿಂದ ಸ್ಫೂರ್ತಿಗೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.86 ಅಂಕ ಗಳಿಸಿದ್ದಳು. ಅದಕ್ಕೆ ಸ್ಮೈಟ್ ಸಂಸ್ಥೆ 12 ಸಾವಿರ ರೂ. ವಿದ್ಯಾರ್ಥಿವೇತನ ನೀಡಿತ್ತು. ಇನ್ನೇನು ತನ್ನ ಕಾಲೇಜು ಜೀವನದ ಆರಂಭವಾಯಿತು ಎಂದು ಕನಸು ಕಾಣುತ್ತಿದ್ದ ವೇದಾಗೆ ಮತ್ತೊಂದು ಕಂಟಕ ಎದುರಾಗಿದೆ. ಹಿಂದೆ ಬಡತನ ಅಡ್ಡಿಯಾದರೆ ಈಗ ಭಗವಂತನೇ ಅಡ್ಡಿಯಾಗಿದ್ದಾನೆ.

ಅದೇನೆಂದರೆ, ವೇದಾಳ ತಾಯಿಯ ಕನಸಿನಲ್ಲಿ ಬಂದ ಭಗವಂತ 'ಮಗಳು ಕಾಲೇಜು ಓದುವುದು ಬೇಡ' ಎಂದನಂತೆ ಇದನ್ನು ನಂಬಿದ ದಂಪತಿ ಮಗಳನ್ನು ಶಿಕ್ಷಣದಿಂದ ಮುಂದುವರಿಸದಂತೆ ಸೂಚನೆ ನೀಡಿದ್ದಾರೆ. ಅದಕ್ಕೆ ಸಮ್ಮತಿ ಸೂಚಿಸಿದ ವೇದಾ ತನಗೆ ದೊರೆತಿದ್ದ 12 ಸಾವಿರ ರೂ. ವಿದ್ಯಾರ್ಥಿವೇತನವನ್ನು ನೀಡಿದ ಸಂಸ್ಥೆಗೆ ಹಿಂತಿರುಗಿಸಿ ''ನನ್ನ ಕಾಲೇಜು ಶಿಕ್ಷಣಕ್ಕೆಂದು ನೀಡಿರುವ ಇದನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಇಷ್ಟವಿಲ್ಲ, ಇದು ಮತ್ತಿನ್ನಾರಿಗಾದರೂ ಬಳಕೆಯಾಗಲಿ. ನನ್ನನ್ನು ಗುರುತಿಸಿ ಪ್ರೋತ್ಸಾಹಿಸಿದ್ದಕ್ಕೆ ಧನ್ಯವಾದಗಳು'' ಎಂದು ಹೇಳಿದ್ದಾಳೆ. ಹಣ ಸಿಕ್ಕರೆ ಸಾಕು ದೋಚಿಕೊಳ್ಳುವವರೇ ಹೆಚ್ಚಾಗಿರುವ ಇಂದಿನ ಕಾಲದಲ್ಲೂ ತನಗೆ ಬಂದ ಹಣವನ್ನು ಪ್ರಾಮಾಣಿಕವಾಗಿ ಹಿಂತಿರುಗಿಸಿದ್ದಾಳೆ. ಮನೆಯಲ್ಲಿ ತೀವ್ರ ಬಡತನವಿದ್ದರೂ ಅದನ್ನು ಲೆಕ್ಕಿಸದೆ ಮೆರೆದ ಪ್ರಾಮಾಣಿಕತೆ ಅನುಕರಣೀಯ.

ಮಗಳ ಶಿಕ್ಷಣ ನಿಲ್ಲಿಸಲು ಮುಂದಾಗಿರುವ ಪೋಷಕರ ನಿರ್ಧಾರಕ್ಕೆ ಶಾಲಾ ಬೋಧಕವೃಂದ ಮತ್ತು ಸ್ಮೈಟ್ ಸಂಸ್ಥೆಯವರು ತೀವ್ರ ಬೇಸರ ವ್ಯಕ್ತಪಡಿಸಿದ್ದು ಪ್ರತಿಭಾವಂತೆಯ ಶಿಕ್ಷಣ ನಿಲ್ಲಿಸುವುದೆ ಬೇಡ ಎಂದು ಸಲಹೆ ನೀಡಿದ್ದಾರೆ.

**ಎಲೆಮರೆ ಕಾಯಿಯಂತೆ ಸಾಕಷ್ಟು ಪ್ರತಿಭಾವಂತ ಮಕ್ಕಳಿದ್ದಾರೆ. ಅವರನ್ನು ಪತ್ತೆಹಚ್ಚಿ ಹಣಕಾಸಿನ ಸಹಕಾರ ನೀಡಲಾಗಿದೆ. ಆದರೂ, ಯಾವುದೇ ಪ್ರಯೋಜನವಾಗುತ್ತಿಲ್ಲ ಎಂಬುದೇ ಬೇಸರದ ಸಂಗತಿ.**

**- ನಾರಾಯಣ್,**
ಮುಖ್ಯೋಪಾಧ್ಯಾಯರು

**ಸ್ಮೈಟ್ ಸಂಸ್ಥೆಯಿರುವುದೆ ಗ್ರಾಮೀಣ ಹೆಣ್ಣು ಮಕ್ಕಳ ಶೈಕ್ಷಣಿಕ ಸಹಕಾರಕ್ಕೆ. ಪ್ರತಿಭಾವಂತರನ್ನು ಹೆಕ್ಕಿ, ಅವರ ಓದಿಗೆ ಬಡತನ ಅಡ್ಡಿಬಾರದಂತೆ ಫಲಿತಾಂಶ ಅಭಿವೃದ್ಧಿಯಾಗುವಂತೆ ಪ್ರೋತ್ಸಾಹಿಸುವುದೇ ಸಂಸ್ಥೆ ಉದ್ದೇಶ. ಈ ಪ್ರಕರಣದಿಂದ ಸಂಸ್ಥೆ ಉತ್ಸಾಹಕ್ಕೆ ತಣ್ಣೀರೆರೆಚಿದಂತಾಗಿದೆ.**

**-ಡಾ ವಸುಪ್ರಕಾಶ್,**
**ಕಾರ್ಯದರ್ಶಿ, ಸ್ಮೈಟ್ ಸಂಸ್ಥೆ ಬೆಂಗಳೂರು.**

Generated by CamScanner from intsig.com

# ಸ್ಟೈಟ್ ದತ್ತಿ ಅಡಿಯಲ್ಲಿ ಶೇ.100 ಫಲಿತಾಂಶ

**ವಿಕ ಸುದ್ದಿಲೋಕ** ಮಾಗಡಿ

ಸ್ಟೈಟ್ ದತ್ತಿನಿಧಿ ವಿದ್ಯಾರ್ಥಿ ವೇತನ ಪಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೆಲ್ಲರೂ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣರಾಗುವ ಮೂಲಕ ಶೇ.100 ಫಲಿತಾಂಶ ಲಭಿಸಿದೆ. ಇದರಿಂದ ಸಂಸ್ಥೆಗೆ ಒಳ್ಳೆಯ ಹೆಸರು ಬಂದಿದೆ ಎಂದು ಸಂಸ್ಥೆಯ ಅಧ್ಯಕ್ಷ ಸೋಮಶೇಖರ್ ಹೇಳಿದರು.

ತಾಲೂಕಿನ ಬ್ಯಾಲಕೆರೆ ಡಾ.ಶಿವಕುಮಾರಸ್ವಾಮಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ನಡೆದ ಪರೀಕ್ಷಾ ಫಲಿತಾಂಶ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾಗಡಿ ತಾಲೂಕಿನ ಸಿದ್ಧಗಂಗಾ ಮಠದ ಎಲ್ಲ ವಿದ್ಯಾ ಸಂಸ್ಥೆಗಳಿಗೆ ಈ ಯೋಜನೆ ವಿಸ್ತರಿಸುವ ಉದ್ದೇಶ ಹೊಂದಿದ್ದು, ಎರಡು ವರ್ಷಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಧನಸಹಾಯ ನೀಡುವ ಪದ್ಧತಿಯೊಂದಿಗೆ 9ಶಾಲೆಗಳಿಗೆ ದತ್ತಿ ಯೋಜನೆ ವಿಸ್ತರಿಸಲಾಗಿದೆ ಎಂದರು. ಅಲ್ಲದೆ, ಈಗ ಸೂಕ್ತ ಸ್ಪಂದನೆ ಇಲ್ಲದ ಕೆಲವು ಶಾಲೆಗಳನ್ನು ಬಿಟ್ಟು ಏಳು ಶಾಲೆಗಳು ಮಾತ್ರ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಸ್ಟೈಟ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವಾಸು ಪ್ರಕಾಶ್ ಮಾತನಾಡಿ, ಏಳು ಶಾಲೆಗಳಿಂದ ಆಯ್ಕೆಯಾದ 70 ವಿದ್ಯಾರ್ಥಿ ಗಳಿಗೆ ಪ್ರತಿಮಾಹೆಯಾನ 500ರೂ ಸಹಾಯಧನ, ಉಚಿತ ನೋಟ್‌ಬುಕ್, ಬ್ಯಾಟರಿ ಸಹಿತ ಟೇಬಲ್‌ಲ್ಯಾಂಪ್, ವರ್ಕ್‌ಬುಕ್, ಸ್ಟಡಿ ಟೇಬಲ್ ಮತ್ತು ಕಿಟ್‌ಗಳನ್ನು ನೀಡಲಾಗುತ್ತಿದೆ. ಪ್ರತಿಶಾಲೆಗೆ ಪ್ರೊಜೆಕ್ಟರ್ ಸಹಿತ ಶೈಕ್ಷಣಿಕ ವಿಷಯವಾರು ಡಿವಿಡಿ ಗಳನ್ನು ಉಚಿತವಾಗಿ ನೀಡುತ್ತಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಎಣ್ಣೆಗೆರೆಯ ಬಸವರಾಜು, ಹುಲಿಕಲ್‌ನ ನಂಜಾಮರಿ, ಶೋಭಾ, ಸೋಮಶೇಖರ್, ಗಣಕಯಂತ್ರ ಬೋಧಕ ಮಂಜುನಾಥ್ ಭಾಗವಹಿಸಿದ್ದರು.



**ಮಾಗಡಿ ತಾಲೂಕಿನ ಬ್ಯಾಲಕೆರೆ ಪ್ರೌಢಶಾಲೆಯಲ್ಲಿ ನಡೆದ ಸ್ಟೈಟ್‌ದತ್ತಿ ನಿಧಿ ಫಲಿತಾಂಶ ಪರಿಶೀಲನಾ ಸಭೆಯಲ್ಲಿ ತಾಲೂಕಿನ ಹಲವು ಶಾಲೆಗಳ ಮುಖ್ಯೋಪಾಧ್ಯಾಯರು ಭಾಗವಹಿಸಿದ್ದರು.**

Generated by CamScanner from intsig.com